## ಕೃಷಿ ವಿಶ್ವವಿದ್ಯಾನಿಲಯ ಜಿ.ಕೆ.ವಿ.ಕೆ. ಬೆಂಗಳೂರು

# ಕೃಷಿ ಸೊಬಗು

## ಲಕ್ಕೊಂಡಹಳ್ಳಿ

ಲಕ್ಕೊಂಡಹಳ್ಳಿ RAWEP

# ಮುನ್ನುಡಿ...

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು  ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಜೊತೆಗೆ ಅವರಿಗೆ ಸೈದಾಂತಿಕ ಹಾಗೂ ಪ್ರಾಯೋಗಿಕ ಅಂಶಗಳ ತಾಂತ್ರಿಕ ಶಿಕ್ಷಣವನ್ನು ನೀಡಿ ಅವರ ಸರ್ವತೋಮುಖ ಬೆಳವಣಿಗೆಯ ಗುರಿ ಹೊಂದಿದೆ. ಇದರ ಅಂಗವಾದ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದಲ್ಲಿ ತೊಡಗಿರುವ ಲಕ್ಕೊಂಡಹಳ್ಳಿಯ ವಿದ್ಯಾರ್ಥಿಗಳು ಅವರ ಕಾರ್ಯಕ್ರಮ ಮತ್ತು ಅನುಭವಗಳ ದರ್ಪಣವಾಗಿ ' ಕೃಷಿ ಸೊಬಗು ' ಎಂಬ ಸಂಚಿಕೆಯನ್ನು ಹೊರತರಲಿದ್ದರೆ. ಈ ಪ್ರಯತ್ನಕ್ಕೆ ನನ್ನ ಶುಭಾಶಯಗಳನ್ನು ಕೋರುತ್ತೇನೆ.



ಡಾ. ಎನ್. ಬಿ. ಪ್ರಕಾಶ್
ಡೀನ್ (ಕೃಷಿ)
ಕೃಷಿ ವಿಶ್ವವಿದ್ಯಾನಿಲಯ ಜಿ.ಕೆ.ವಿ.ಕೆ.
ಬೆಂಗಳೂರು - 65



ಡಾ. ಗಣೇಶಮೂರ್ತಿ . ಎಸ್
ಸಂಯೋಜಕರು, ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ,
ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ,
ಬೆಂಗಳೂರು -65

ಕೃಷಿ ಪದವಿಯಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವದ ಕಾರ್ಯಕ್ರಮವು ಒಂದು ಅವಿಭಾಜ್ಯ ಅಂಗವಾಗಿದ್ದು.ವಿಧ್ಯಾರ್ಥಿಗಳಿಗೆ ಗ್ರಾಮೀಣ ಜೀವನ,ರೈತರ ಜೀವನದ ಬಗ್ಗೆ ಅನುಭವ ನೀಡುವ ಮಾರ್ಗವಾಗಿದೆ.ಈ ಕಾರ್ಯಕ್ರಮದಲ್ಲಿ ತೊಡಗಿರುವ ಲಕ್ಕೊಂಡಹಳ್ಳಿಯ ವಿಧ್ಯಾರ್ಥಿಗಳು ಇದರ ಭಾಗವಾಗಿ ' ಕೃಷಿ ಸೊಬಗು ' ಎಂಬ ಮಾಸಿಕ ಪತ್ರಿಕೆಯನ್ನು ತರಲಿರುವುದು ಸಂತಸ ತಂದಿದೆ. ವಿದ್ಯಾರ್ಥಿಗಳ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ.



ಡಾ. ಹೆಚ್.ಕೆ. ಪಂಕಜ
ಸಹಾಯಕ ಪ್ರಾಧ್ಯಾಪಕರು
ಕೃಷಿ ವಿಸ್ತರಣಾ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ,
ಬೆಂಗಳೂರು -65

ಗ್ರಾಮೀಣ ಕೃಷಿ ಕಾರ್ಯಾನುಭವ ಕಾ ರ್ಯಕ್ರಮದಲ್ಲಿ ತೊಡಗಿಕೊಂಡಿರುವ ಲಕ್ಕೊಂಡಹಳ್ಳಿಯ ವಿದ್ಯಾರ್ಥಿಗಳು ಗ್ರಾಮೀಣ ಜೀವನಕ್ಕೆ ಪರಿಚಿತರಾಗು ತ್ತಿರುವ ಸಂದರ್ಭದಲ್ಲಿ ತಮ್ಮ ಚಟುವಟಿಕೆಗಳು , ಪ್ರಾಯೋಗಿಕ ಅನುಭವಗಳನ್ನು ತಿಳಿಸಲಿರುವಂತಹ 'ಕೃಷಿ ಸೊಬಗು' ಪತ್ರಿಕೆಯನ್ನು ಬಿಡುಗಡೆಗೊಳಿಸಲಿದ್ದಾ ರೆ. ಇದು ಇವರ ಪ್ರಕಟಣಾ ಕೌಶಲ್ಯಕ್ಕೆ ಕೈಗನ್ನಡಿಯಾಗಿದ್ದು , ಈ ಪ್ರಯತ್ನಕ್ಕೆ ಶುಭಾಶಯಗಳನ್ನು ಕೋರುತ್ತೇನೆ.

# RAWEP 2023

# ಮುಖ್ಯಾಂಶಗಳು...

1. ಗ್ರಾಮೀಣ ಕೃಷಿ ಕಾರ್ಯಾನುಭವಾ ಕಾರ್ಯಕ್ರಮ -2023
2. RAWEP ನ ಮುಖ್ಯ ಉದ್ದೇಶಗಳು
3. ಹಳ್ಳಿಯ ಪಕ್ಷಿನೋಟ
4. ಮಾಹಿತಿ ಸಂಗ್ರಹಣೆ
5. ಗ್ರಾಮಸಭೆ
6. ಮಣ್ಣಿನ ಮಾದಾರಿಯ ಸಂಗ್ರಹಣಾ ವಿಧಾನ
7. ಮಣ್ಣಿನಲ್ಲಿರುವ ಪೋಷಕಾಂಶ, ಸಸ್ಯ ಜೀವಕ್ಕೆ ಜೀವಾಂಶ
8. ಬೆಳೆ ಸಂಗ್ರಹಾಲಯದ ರಚನೆ
9. ಬೀಜೋಪಚರದ ಪ್ರಾತ್ಯಕ್ಷಿಕೆ
10. ಸೇವಂತಿಗೆ ಕಟ್ಟಿಂಗ್ಸ್
11. ಪಶು ಆರೋಗ್ಯ ತಪಾಸಣಾ ಶಿಬಿರ
12. ಈ - ಕೆ ವೈ ಸಿ
13. ಬೆಳೆ ಸಮೀಕ್ಷೆ
14. ಅಜೋಲಾ
15. ಪಿ ಆರ್ ಎ
16. ಎರೆಹುಳು ಗೊಬ್ಬರದ ತಯಾರಿಕೆ
17. ರೈತರ ಬೆಳೆ ಕ್ಷೇತ್ರ ಭೇಟಿ
18. ಕೃಷಿ ಹೊಂಡ
19. ಕೀಟನಾಶಕಗಳನ್ನು ಸಿಂಪಡಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು
20. ಬ್ರೋಕಲಿ ಕಪ್ಪು ಕೊಳಪೆ ರೋಗ
21. ಮೇಕ್ಕೆ ಜೋಳದಲ್ಲಿ ಸೈನಿಕ ಹುಳು
22. ಸಮಸ್ಯ ವೃಕ್ಷ
23. ವಿಶ್ವ ಮಣ್ಣಿನ ದಿನ
24. ಅಣಬೆ ಬೇಸಾಯ
25. ಕಿಸಾನ್ ಕ್ರೆಡಿಟ್ ಕಾರ್ಡ್

# ಗ್ರಾಮೀಣ ಕೃಷಿ ಕರ್ಯಾನುಭವ ಕಾರ್ಯಕ್ರಮ -2023

ಅನುಭವದ ಕಲಿಕೆಯು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವೃತ್ತಿಪರ ಸಾಮರ್ಥ್ಯ , ಕೌಶಲ್ಯ ಅಭಿವೃದ್ಧಿ ಮತ್ತು ಆತ್ಮವಿಶ್ವಾಸವನ್ನು ಅಭಿವೃದ್ಧಿಪಡಿಸಲು " ಕಲಿಯುವಾಗ ಗಳಿಸುವ" ಕಡೆಗೆ ಹೆಜ್ಜೆ ಹಾಕಲು ಒಂದು ಅವಕಾಶವಾಗಿದೆ. ಗ್ರಾಮೀಣ ಕೃಷಿ ಕಾರ್ಯಗಳ ಅನುಭವವೂ ವಿದ್ಯಾರ್ಥಿಗಳಿಗೆ ಗ್ರಾಮೀಣ ಅನುಭವವನ್ನು ಪಡೆಯಲು , ಅವರಿಗೆ ಆತ್ಮವಿಶ್ವಾಸವನ್ನು ನೀಡಲು ಮತ್ತು ನಿಜಜೀವನದ ಸಂದರ್ಭಗಳಲ್ಲಿ,ವಿಶೇಷವಾಗಿ ರೈತರು,ಬೆಳೆಗಾರರು ಇತ್ಯಾದಿಗಳೊಂದಿಗೆ ಸಂಪರ್ಕದಲ್ಲಿ ಕೃಷಿ ಸಮಸ್ಯೆ ಪರಿಹರಿಸುವ ಸಾಮರ್ಥ್ಯಗಳನ್ನು ಹೆಚ್ಚಿಸಲು ಅನುವು ಮಾಡಿಕೊಡುತ್ತದೆ.








# RAWEP ನ ಮುಖ್ಯ ಉದ್ದೇಶಗಳು



- ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಗ್ರಾಮೀಣ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುವುದು .
- ರೈತರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು ಮತ್ತು ಅವರ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಿತರಾಗುವಂತೆ ಮಾಡುವುದು .
- ನೈಜ ಕ್ಷೇತ್ರದ ಸನ್ನಿವೇಶಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ರೋಗನಿರ್ಣಯ ಮತ್ತು ಪರಿಹಾರ ಜ್ಞಾನವನ್ನು ಪ್ರಾಯೋಗಿಕ ತರಬೇತಿಯ ಮೂಲಕ ನೀಡುವುದು
- ತಂತ್ರಜ್ಞಾನದ ವರ್ಗಾವಣೆಯಲ್ಲಿ ಇತ್ತೀಚಿನ ವಿಸ್ತರಣಾ ವಿಧಾನಗಳನ್ನು ಬಳಸಿಕೊಂಡು ರೈತರೊಂದಿಗೆ ಪರಿಣಾಮಕಾರಿ ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು .
- ಕೃಷಿ ಸಮಸ್ಯೆಗಳನ್ನು ಪರಿಹರಿಸಲು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಬೆಳೆಸುವುದು .

# ಹಳ್ಳಿಯ ಪಕ್ಷಿ ನೋಟ

ಬೆಂಗಳೂರು ಗ್ರಾಮಾಂತರ  ಜಿಲ್ಲೆಯ ಹೊಸಕೊಟೆ ತಾಲ್ಲೂಕಿನ ಒಂದು ಹಳ್ಳಿ ಲಕ್ಕೊಂಡಹಳ್ಳಿ. ಸೂಲಿಬೆಲೆ ಇಂದ ಸುಮಾರು 10km ಹಾಗೂ ಹೊಸಕೋಟೆ ಕೇಂದ್ರದಿಂದ 5km ದೂರದಲ್ಲಿದೆ.





ಲಕ್ಕೊಂಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಈ  ಹಳ್ಳಿ ಸುಮಾರು 2224 ಎಕರೆ ವಿಸ್ತಾರವಾಗಿದೆ. 2011 ರ ಜನಗಣತಿಯ ಪ್ರಕಾರ ಸಮಾರು 1242 ಜನರು ವಾಸವಿರುವ ಹಳ್ಳಿಯಲ್ಲಿ ಮತ್ತು 660 ಗಂಡಸರು ಮತ್ತು 582 ಹೆಂಗಸರು ಒಳಗೊಂಡಿದೆ. ಜನರ ಸಾಕ್ಷರತೆಯ ಪ್ರಮಾಣವು ಸುಮಾರು  72.2% ಆಗಿದ್ದು ಶೇ.58.6 ಗಂಡಸರು ಮತ್ತು ಶೇ. 41.4 ರಷ್ಟು ಮಹಿಳೆಯರು ಸಾಕ್ಷರರಾಗಿದ್ದಾರೆ

ಇಲ್ಲಿ ರಾಗಿ, ಗುಲಾಬಿ, ಜೋಳ, ಸೇವಂತಿಗೆ, ಬ್ರೋಕೊಲಿ,ತೊಗರಿ ಪ್ರಮುಖ ಬೆಳೆಗಳಾಗಿದೆ.ರೈತರು ಮಾರುಕಟ್ಟೆಗಾಗಿ ಹೊಸಕೋಟೆ ಹೂಮಂಡಿಗೆ ಹಾಗೂ ದಲ್ಲಾಳಿಗಳ ಮೇಲೆ ಅವಲಂಬಿತರಾಗಿದ್ದಾರೆ. ನೀರಾವರಿಯ ಮೂಲವಾಗಿ ಹೆಚ್ಚಾಗಿ ಮಳೆ ಹಾಗೂ ಕೊಳವೆ ಬಾವಿ ಚಾಲ್ತಿಯಲ್ಲಿದೆ.





ಊರಿನಲ್ಲಿ ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಲಿನ ಡೈರಿ, ಗ್ರಂಥಾಲಯ, ಶುದ್ಧ ಕುಡಿಯುವ ನೀರು ಸಾರಿಗೆ ವ್ಯವಸ್ಥೆ ಇದ್ದು ಜನರ ಮೂಲಭೂತ ಬೇಡಿಕೆಗಳು ನೆರವೇರಿದೆ.







# ಮಾಹಿತಿ ಸಂಗ್ರಹಣೆ...

ಕೃಷಿಯಲ್ಲಿನ ಸಮಸ್ಯೆಗಳನ್ನು, ರೈತರು ಬೀಜಗಳನ್ನು ಕೊಂಡುಕೊಳ್ಳುವುದರಿಂದ ಉತ್ಪನ್ನಗಳ ಮಾರಾಟದವರೆಗೂ ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ ಸವಾಲುಗಳು ಹಾಗೂ ಮಾರುಕಟ್ಟೆಯಲ್ಲಿನ ಸಮಸ್ಯೆಗಳು, ತಳಿಗಳ ಇಳುವರಿಯಲ್ಲಿನ ಅಂತರ, ಕೃಷಿಯಲ್ಲಿ ತಾಂತ್ರಿಕತೆಯ
ಅಲಭ್ಯತೆ , ಹೊಸ ತಂತ್ರಜ್ಞಾನಗಳನ್ನು ಅಳವಡಿಸಿ ಕೊಳ್ಳುವಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಳ್ಳುವುದು ಕೃಷಿ ವಿಸ್ತರಣೆ ಯಲ್ಲಿ ಪ್ರಧಾನವಾದ ಅಂಶ, ಸಮಸ್ಯೆಗಳ ವಿಶ್ಲೇಷಣೆ ಹಾಗೂ ಪರಿಹಾರ ಸೂಚಿಸಲು ರೈತರಿಂದ ಮಾಹಿತಿ ಸಂಗ್ರಹಿಸುವುದು ಅತ್ಯಗತ್ಯ

ವಿದ್ಯಾರ್ಥಿಗಳು ಲಕ್ಕೊಂದಹಳ್ಳಿಯ ಗ್ರಾಮದಲ್ಲಿ ಒಬ್ಬ ವಿದ್ಯಾರ್ಥಿಗೆ ಐದು ಜನ ರೈತರಂತೆ ಇಪ್ಪತ್ತು ವಿದ್ಯಾರ್ಥಿಗಳು ಊರಿನ ರೈತರಿಂದ ಮಾಹಿತಿ ಸಂಗ್ರಹಣೆ ಮಾಡಿದರು. 5 ರೈತರಲ್ಲಿ ಒಬ್ಬ ದೊಡ್ಡ ರೈತರು, ಇಬ್ಬರು ಮಧ್ಯಮ ರೈತರು, ಇಬ್ಬರು ಅತಿ ಸಣ್ಣ ರೈತರಿಂದ ಕೃಷಿ ಚಟುವಟಿಕೆಗಳು, ಕೃಷಿ ಪದ್ಧತಿ ,
ಬೆಳೆಗಳ ವಿವರ, ಕೃಷಿ ಬೇಸಾಯ ಕ್ರಮಗಳು, ಉಪಯೋಗಿಸುತ್ತಿರುವ ಬೀಜ, ರಸಗೊಬ್ಬರ, ಕೊಟ್ಟಿಗೆ ಗೊಬ್ಬರಗಳ ಬಗ್ಗೆ ಹಾಗೂ ಮನೆಯಲ್ಲಿರುವ ಕೃಷಿ ಸಲಕರಣೆಗಳ ಬಗ್ಗೆ ಮಾಹಿತಿ , ಮಾರುಕಟ್ಟೆ ಮಾರ್ಗಗಳು, ಆಹಾರ ಪದ್ಧತಿಗಳು, ಹಾಗೂ ಕೀಟ ಮತ್ತು ರೋಗಬಾದೆಗಳ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡಲಾಯಿತು.
ನಂತರ ಎಲ್ಲಾ ವಿದ್ಯಾರ್ಥಿಗಳಿಂದ ಸಂಗ್ರಹವಾದ ಮಾಹಿತಿಯನ್ನು ಕ್ರೋಡಿಕರಿಸಿ ಊರಿನ ಕೃಷಿಕರ ಪ್ರಮುಖ ಬೆಳೆಗಳು ಅವುಗಳಿಗಾಗುವ ಕೀಟ ಹಾಗೂ ರೋಗಗಳು, ರೈತರು ಪಾಲಿಸುವ ಪರಿಹಾರ ಕ್ರಮಗಳು,ಬೇಸಾಯ ಕ್ರಮಗಳು , ನಾವು ನಡೆಸಬೇಕಾದ ಕಾರ್ಯಕ್ರಮಗಳ ಬಗ್ಗೆ  ನಿರ್ಧರಿಸಲಾಯಿತು.

ಈ ಮೂಲಕ ಸಮಸ್ಯೆಗಳ ಮೇಲೆ ಗುಂಪು ಚರ್ಚೆ ಹಾಗೂ ಪದ್ಧತಿ ಪ್ರಾತ್ಯಕ್ಷಿಕೆ ಮಾಡಿ ಅವರಿಗೆ ಸರಿಹೊಂದುವಂತಹ ಪರ್ಯಾಯ ಬೆಳೆ ಯೋಜನೆಗಳನ್ನು ರೂಪಿಸುವುದು ಹಾಗೂ ಕಾರ್ಯಗಳನ್ನು ನಡೆಸುವುದು ಈ ಕಾರ್ಯಕ್ರಮದ ಉದ್ದೇಶ.









# ಗ್ರಾಮ ಸಭೆ



ಕೃಷಿ ವಿಶ್ವ ವಿದ್ಯಾನಿಲಯ ಬೆಂಗಳೂರು , ಕೃಷಿ ಕಾಲೇಜು ಜಿಕೆವಿಕೆ ಇಲ್ಲಿನ ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯನುಭವ ಕಾರ್ಯಕ್ರಮ *2023* ರ ಲಕ್ಕೊಂಡಹಳ್ಳಿಯ  ಗ್ರಾಮ ವಾಸ್ತವ್ಯದ ಪ್ರಾರಂಭಿಕ ಹಂತದ ಕಾರ್ಯಕ್ರಮಗಳಲ್ಲಿ ಒಂದು, ರೈತರಿಗೆ ವೈಜ್ಞಾನಿಕ ಮಾಹಿತಿ ನೀಡುವ ಕೃಷಿ ಮಾಹಿತಿ ಕೇಂದ್ರದ ಉದ್ಘಾಟನೆ.

ಕಾರ್ಯಕ್ರಮದ ಪ್ರಾರಂಭಿಕ ಹಂತವಾಗಿ ಪ್ರಥಮ ಗ್ರಾಮಸಭೆಯನ್ನು ದಿನಾಂಕ *26-10-2023* ರಂದು ಆಯೋಜಿಸಲಾಯಿತು. ಗ್ರಾಮಸಭೆಗೆ ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿ ಡಾ. ಶ್ರೀನಿವಾಸ್ ಮತ್ತು ಸಹಾಯಕ ತೋಟಗಾರಿಕಾ ಅಧಿಕಾರಿ ಸುನಿಲ್ ಅವರು"ವಿದ್ಯಾರ್ಥಿಗಳು ಮೂರು ತಿಂಗಳ ಕಾಲ ಗ್ರಾಮದಲ್ಲಿ ಇರಲಿದ್ದು ಈ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರಾಯೋಗಿಕ ಅನುಭವವನ್ನು ಪಡೆಯುವುದರ ಜೊತೆಗೆ ಗ್ರಾಮದ ರೈತರೊಡನೆ ಹೊಸದಾಗಿ ಅಭಿವೃದ್ಧಿ ಪಡಿಸಿದ ತಳಿ ಮತ್ತು ತಂತ್ರಜ್ಞಾನಗಳನ್ನು ತಲುಪಿಸುವ ಪ್ರಯತ್ನ ನಡೆಸಲಿದ್ದಾರೆ ಎಂದು ತಿಳಿಸುತ್ತಾ, ಇದರ ಸದುಪಯೋಗವನ್ನು ರೈತರು ಉಪಯೋಗಿಸಿಕೊಳ್ಳಬೇಕು" ಎಂದು ತಿಳಿಸಿದರು . ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.





# ಮಣ್ಣಿನ ಮಾದರಿಯ ಸಂಗ್ರಹಣಾ ವಿಧಾನ...

ರಾಸಾಯನಿಕ ಗೊಬ್ಬರಗಳ ಬಳಕೆ ತಾರಕಕ್ಕೆ ಏರುತ್ತಿರುವ ಪ್ರಸ್ತುತ ಕೃಷಿ ಪದ್ಧತಿಯಲ್ಲಿ, ಮಣ್ಣಿನಆರೋಗ್ಯ ಮತ್ತು ಗುಣಮಟ್ಟದ ದೃಷ್ಟಿಯಿಂದ ನಿಖರವಾದ , ಮಣ್ಣಿನ ಬೇಡಿಕೆಗೆ ಅನುಗುಣವಾಗಿ ಗೊಬ್ಬರಗಳ ಬಳಕೆ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಾ ಇದೆ.


ಮಣ್ಣಿನ ಮಾದರಿ ಪರೀಕ್ಷೆಯು, ಮಣ್ಣಿನ ಆರೋಗ್ಯ , ಗುಣಮಟ್ಟ, ಬೇಡಿಕೆ ಮತ್ತು ಯಥೇಚ್ಚತೆ ತಿಳಿಸುವ ಮಾರ್ಗವಾಗಿದೆ. ಈ ಬಗೆಯಲ್ಲಿ ಮಣ್ಣಿನ ಮಾದರಿ ತಗೆಯುವ ವಿಧಾನ, ಸ್ಥಳ ,ಪ್ರಮಾಣ ಮುಂತಾದವುಗಳನ್ನು ಗ್ರಾಮದ ರೈತರಿಗೆ ತಿಳಿಸಿಕೊಡಲು ಗ್ರಾಮಸಭೆಯನ್ನು ಹಮ್ಮಿಕೊಳ್ಳಲಾಯಿತು.

ವಿದ್ಯಾರ್ಥಿಗಳು ರೈತರ ತಾಕುಗಳಲ್ಲಿ ಮಣ್ಣಿನ ಮಾದರಿಯನ್ನು ತೆಗೆಯುವ ಪದ್ಧತಿ ಪ್ರಾತ್ಯಕ್ಷಿಕೆಯೊಂದಿಗೆ ಗ್ರಾಮಸಭೆಯಲ್ಲಿ ಜನರಿಗೆ ಇದರ ಮಹತ್ವ ಮತ್ತು ವಿಧಾನವನ್ನು ತಿಳಿಯಪಡಿಸಿದರು




# ಮಣ್ಣಿನಲ್ಲಿರುವ ಪೋಷಕಾಂಶ, ಸಸ್ಯ ಜೀವಕ್ಕೆ ಜೀವಾಂಶ...






ಮಾನವ ದೇಹಕ್ಕೆ ಆಹಾರ ಎಷ್ಟು ಮುಖ್ಯವೋ ,ಸಸ್ಯಗಳಿಗೆ ಸರಿಯಾದ ಸಮಯಕ್ಕೆ , ಸರಿಯಾದಮೊತ್ತದಲ್ಲಿ, ಸರಿಯಾದ ರೀತಿಯಲ್ಲಿ ಪೋಷಕಾಂಶಗಳ ಲಭ್ಯತೆ ಅಷ್ಟೇ ಮುಖ್ಯ. ಅಂತಹ ಪೋಷಕಾಂಶಗಳ ಕೊರತೆ ಉಂಟಾದಾಗ ಅದನ್ನು ಗುರುತಿಸಿ ಸರಿಯಾದ ವಿಧಾನದಲ್ಲಿ ನಿರ್ವಹಿಸುವುದು ಪ್ರಮುಖ ಕಾರ್ಯಗಳಲ್ಲಿ ಒಂದು , ಈ ಬಗ್ಗೆ ಗ್ರಾಮದಲ್ಲಿ ರೈತರಿಗೆ ಮಾಹಿತಿ ಒದಗಿಸುವ ಕಾರ್ಯಕ್ರಮವನ್ನು ರೈತರು ಮತ್ತು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಂಡರು.





# ಬೆಳೆ ಸಂಗ್ರಹಾಲಯದ ರಚನೆ ...

ಗ್ರಾಮೀಣ ಕೃಷಿ ಕಾರ್ಯನುಭವ ಕಾರ್ಯಕರ್ಮದ ಇನೊಂದು ಪ್ರಮುಖ ಅಂಗವೇ ಬೆಳೆ ಸಂಗ್ರಹಾಲಯ.ರೈತರಿಗೆ ವಿವಿಧ ಪ್ರಬೇಧದ , ವಿವಿಧ ತಳಿಗಳ ಬೆಳೆಗಳನು ವೈಜ್ಞಾನಿಕವಾಗಿ ಬೆಳೆದು ಅದರ ವಿಶೇಷತೆ ಮತ್ತು ಉಪಯೋಗಗಳನ್ನು ತಿಳಿಸುವ ಪ್ರಯತ್ನ ಇದಾಗಿದೆ.
ಬೆಳೆ ಸಂಗ್ರಹಾಲಯದ ರಚನೆಗಾಗಿ ಊರನ್ನು ಸಂಪ್ರಕಿಸುವ ರಸ್ತೆಯ ಬದಿಯಲ್ಲಿಯೇ, ಬೆಳೆಗಳ ಬೆಳೆವಣಿಗೆಯನ್ನು ತೋರಿಸಿಬಲವಂತಹ , ಸೂಕ್ತ ಜಾಗವನ್ನು ಕಿರಣ್ ಅವರ ಸಹಾಯದಿಂದ ಪಡೆದೆವು . ಇದಕ್ಕೆ ಹೋಲುವಂತಹ ವಿನ್ಯಾಸವನ್ನು ಸಹ ರಚಿಸಲಾಯಿತು. ಮೂರು ವಿಧದ ಸಿರಿಧಾನ್ಯಗಳು, ನಾಲ್ಕು ವಿಧದ ಎಣ್ಣೆ ಕಾಳುಗಳು , ನಾಲ್ಕು ವಿಧದ ಕಾಳುಗಳು ನಾಲ್ಕು ವಿಧದ ಮೇವಿನ ಬೆಳೆಗಳು ಸೇರಿ 19 ವಿಧದ ಬೆಳೆಗಳನ್ನು ಪ್ರದಾರ್ಶಿಸಲು ಸಿದ್ಧತೆ ನಡೆಸಲಾಗುತ್ತಿದೆ.













# ಸೇವಂತಿಗೆ ಕಟ್ಟಿಂಗ್ಸ್

ಹೊಸಕೋಟೆ ತಾಲೂಕಿನ ಲಕ್ಕೊಂಡಹಳ್ಳಿಯಲ್ಲಿ
ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ
2023-24 ರ ಅಂಗವಾಗಿ ಕೃಷಿ ವಿಶ್ವವಿದ್ಯಾನಿಲಯದ
ಅಂತಿಮ ವರ್ಷದ ಬಿ.ಎಸ್ಸಿ (ಆನರ್ಸ್) ಕೃಷಿ
ವಿದ್ಯಾರ್ಥಿಗಳು ಸೇವಂತಿಗೆ ಕಟ್ಟಿಂಗ್ಸ್ ತಯಾರಿಕೆಯ
ಬಗ್ಗೆ ಪದ್ಧತಿ ಪ್ರಾತ್ಯಕ್ಷಿಕೆಯನ್ನು 12/12/2023 ರಂದು
ನಡೆಸಿದರು.

ಮೊದಲಿಗೆ ಸೇವಂತಿಗೆ ಕಟ್ಟಿಂಗ್ಸ್ ತಯಾರಿಕೆಯ
ಮಹತ್ವ ಏನೆಂದರೆ
ಖರ್ಚನ್ನು ಕಡಿಮೆಗೊಳಿಸುತ್ತದೆ, ರೋಗ ಮತ್ತು
ಕೀಟಗಳ ಬಾಧೆಯನ್ನು ಕಡಿಮೆಗೊಳಿಸುತ್ತದೆ.










# ಬೀಜೋಪಚಾರದ ಪ್ರಾತ್ಯಕ್ಷಿಕೆ

ಬೀಜ ಕೃಷಿಯಲ್ಲಿ ಪ್ರಧಾನವಾದ ಮೂಲಭೂತ ವಸ್ತು . ಕೃಷಿಯಲ್ಲಿ ಉತ್ತಮ ಇಳುವರಿ ಪಡೆಯಲು ಬೀಜದ ಆರೋಗ್ಯ ತುಂಬಾ ಮುಖ್ಯ.ಒಮ್ಮೆ ಬೀಜವನ್ನು ಭೂಮಿಗೆ ಸೇರಿಸಿದ ನಂತರ ಅದು ಮೊಳಕೆ ಒಡೆದು ಗಿಡವಾಗಿ ಬೆಳೆಯುವ ತನಕ ಮಣ್ಣಿನ ಹಾನಿಕಾರಕ ಸೂಕ್ಷ್ಮ ಜೀವಿಗಳಿಂದ ಅದಕ್ಕೆ ರಕ್ಷಣೆ ಒದಗಿಸುವುದು ಅತ್ಯಗತ್ಯ.ಹಾಗಾಗಿ ಬೀಜೋಪಚಾರ ಇತಿಚಿನ ದಿನಗಳಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿದೆ.




ದ್ವಿದಳ ಧಾನ್ಯಗಳಲಲ್ಲಿ ಸಾರಜನಕ ಸ್ಥಿರೀಕರಣದ ಸಾಮರ್ಥ್ಯವಿದು ರೈಜೋಬಿಯಂ ಎಂಬ ಸಹಜೀವಿತ ಬ್ಯಾಕ್ಟೀರಿಯಾ ಇದಕ್ಕೆ ಕಾರಣ. ಈ ಬ್ಯಾಕ್ಟೀರಿಯಾವನ್ನು ಕೃತಕವಾಗಿ ಸೇರಿಸುವ ಮೂಲಕ ನೆಲಗಡಲೆಯಲ್ಲಿ ಇಳುವರಿ ಹೆಚ್ಚಿಸಬಹುದು . ಈ ಬಗ್ಗೆ ಕೃಷಿ ವಿಜ್ಞಾನಯನ ಕೇಂದ್ರ ದೊಡ್ಡಬಳ್ಳಪುರ ಅವರ ಜೊತೆ ಸೇರಿ ರೈತರೊಂದಿಗೆ ನೆಲಗಡಲೆಯಲ್ಲಿ ಬೀಜೋಪಚಾರದ ಪದ್ಧತಿ ಪ್ರಾತ್ಯಕ್ಷಿಕೆ ಮಾಡಲಾಯಿತು.



# ಪಶು ಆರೋಗ್ಯ ತಪಾಸಣಾ ಶಿಬಿರ

**ಪುರಾಣ ಕಾಲದಿಂದಲೂ ಪಶುಗಳು ಮಾನವನ ಜೀವನದಲ್ಲಿ ಮತ್ತು ಮಾನವನ ದೇಹಕ್ಕೆ ಬೇಕಾದ ಪೋಷಕಾಂಶಗಳ ಪೂರೈಕೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅಂತಹ ಪಶುಗಳಿಂದ ಉಪಯೋಗಗಳನ್ನು ಪಡೆಯುವುದರ ಜೊತೆಗೆ ಅವುಗಳ ಆರೋಗ್ಯದ ಕಾಳಜಿಯ ಅಗತ್ಯ .ಈ ಉದ್ದೇಶದಿಂದ ಕೃಷಿ ವಿಶ್ವವಿದ್ಯಾ ನಿಲಯ ಬೆಂಗಳೂರು ,ರೈತ ಸಂಪರ್ಕ ಕೇಂದ್ರ , ಪಶು ವೈದ್ಯಕೀಯ ಇಲಾಖೆ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘ ಲಕ್ಕೊಂಡಹಳ್ಳಿ ಸಂಯುಕ್ತ ಆಶ್ರಯದಲ್ಲಿ ದಿನಾಂಕ *10.11.2023*ನೇ ಶುಕ್ರವಾರ ಬರಡು ರಾಸುಗಳ ತಪಾಸಣೆ ಹಾಗೂ ಪಶು ಆರೋಗ್ಯ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿತ್ತು . ಕಾರ್ಯ ಕ್ರಮದಲ್ಲಿ ಡಾ.ಆನಂದ್ ಮನೇಗಾರ್, ಪ್ರಾಧ್ಯಾಪಕರು , ಡಾ.ಶಿವಲಿಂಗಯ್ಯ ,ಇವರ ವೈದ್ಯ ಬಳಗದ ಸಹಾಯದಿಂದ ರಾಸುಗಳಲ್ಲಿ ಜಂತು ನಿವಾರಣೆ, ಬರಡು ರಾಸುಗಳ ಚಿಕಿತ್ಸೆ, ಗರ್ಭ ಪರೀಕ್ಷೆ, ಕೆಚ್ಚಲು ಬಾವು , ಕಾಲು ಬಾಯಿರೋಗ ಲಸಿಕೆಗಳ ಮಾಹಿತಿ ಮತ್ತು ಚಿಕಿತ್ಸೆ ನೀಡಲಾಯಿತು. ಶಿಬಿರದಲ್ಲಿ ಲಕ್ಕೊಂಡಹಳ್ಳಿ ಗ್ರಾಮ ರೈತ ಬಾಂಧವರು ತಮ್ಮ ಜಾನುವಾರು ಗಳೊಂದಿಗೆ ಭಾಗವಹಿಸಿದರು .**







ಪ್ರಜಾ ಪ್ರಗತಿ

## ರಾಸುಗಳ ಆರೋಗ್ಯ ಕಾಪಾಡಲು ಲಸಿಕೆ ಕಡ್ಡಾಯ

### ಲಸಿಕಾ ಅಭಿಯಾನದಲ್ಲಿ ಪಶುಪಾಲನೆ ಇಲಾಖೆ ನಿರ್ದೇಶಕ ಡಾ.ನಾರಾಯಣಸ್ವಾಮಿ ಸಲಹೆ

■ ಪ್ರಜಾಪ್ರಗತಿ.ಕಾಂ

ಜಿಕೆವಿಕೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರಯೋಗಿಕವಾಗಿ ಕೃಷಿ ಮತ್ತು ಹೈನೋದ್ಯಮದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಗ್ರಾಮೀಣ ಭಾಗದಲ್ಲಿ ಈ ರೀತಿಯ ಕಾರ್ಯಕ್ರಮ ರೂಪಿಸುತ್ತೇವೆ. ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಪರಸ್ಪರ ಸಹಕಾರ ಪಡೆದುಕೊಂಡು ಕೃಷಿ ಹಾಗೂ ಹೈನೋದ್ಯಮದ ಬಗ್ಗೆ ಅರಿವನ್ನು ಪಡೆದುಕೊಳ್ಳಬೇಕು. ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಬೇಕು.

■ ಶಿವಾಜಿ ನಾಯಕ್, ಬಮುಲ್ ಉಪನಿರ್ದೇಶಕ



ಕನ್ನಡಪ್ರಭ

ಲಸಿಕೆ ಹಾಕಲು ಸಹಕರಿಸಿ | ಲಕ್ಕೊಂಡಹಳ್ಳಿಯಲ್ಲಿ ಬರಡು ರಾಸುಗಳ ಲಸಿಕಾ ಶಿಬಿರ, ಆರೋಗ್ಯ ತಪಾಸಣಾ ಶಿಬಿರ

## ಕಡ್ಡಾಯ ಲಸಿಕೆ ಹಾಕಿಸಿ ರಾಸುಗಳ ಆರೋಗ್ಯ ಕಾಪಾಡಿ

■ ಕನ್ನಡಪ್ರಭ ವಾರ್ತೆ ಹೊಸಕೋಟೆ

# ಇ - ಕೆ ವೈ ಸಿ

'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ" ಜಮೀನು ಹೊಂದಿರುವ ಎಲ್ಲ ರೈತರು ಈ ಯೋಜನೆ ಅಡಿಯಲ್ಲಿ ಸುಮಾರು 6,000 ಹಣವನ್ನು ಪಡೆಯುತ್ತಿದ್ದು, ಅದನ್ನು ಸರಿಯಾಗಿ ಮೂರು ಕಂತುಗಳಲ್ಲಿ ರೈತರಿಗೆ ಒದಗಿಸುವುದೇ ಈ ಯೋಜನೆಯ ಮೂಲ ಉದ್ದೇಶ.

e-KYC ಎಂಬುದು ರೈತರ ಆಧಾರ್ ಕಾರ್ಡ್ ಗುರುತಿನ ಪರಿಶೀಲನೆ ಮಾಡುವುದಾಗಿದೆ.

ನಾವು ರೈತ ಸಂಪರ್ಕ ಕೇಂದ್ರ, ಕುದೂರಿನ ವಿಸ್ತಾರದಲ್ಲಿ ಬರುವ ಎಲ್ಲ ಗ್ರಾಮದ ರೈತರನ್ನು ದೂರವಾಣಿಯ ಮೂಲಕ ಸಂಪರ್ಕಿಸಿ e - KYC ಮಾಡಿಸಿಕೊಳ್ಳುವಂತೆ ಸಲಹೆ ನೀಡಿದೆವು








# ಬೆಳೆ ಸಮೀಕ್ಷೆ





ರಾಜ್ಯದ ಎಲ್ಲಾ ಕೃಷಿ ಭೂಮಿಗಳಲ್ಲಿ ಬಿತ್ತಿದ ಬೆಳೆಗಳು ಮತ್ತು ನೀರಾವರಿಯ ಪ್ರಕಾರದ ಬಗ್ಗೆ ಸ್ಪಷ್ಟವಾದ ಚಿತ್ರಣವನ್ನು ಹೊಂದಲು ಸರ್ಕಾರ ಯೋಚಿಸುತ್ತಿದ್ದು ರಾಜ್ಯದ ರೈತರು ಮತ್ತು ಬೆಳೆ ಮಾಹಿತಿಗಾಗಿ ಒಂದೇ ಒಂದು ಮೂಲವನ್ನು ರಚಿಸುವುದು ಯೋಜನೆ ದೃಷ್ಟಿ ಯಾಗಿದೆ. ಇದನ್ನು ಪರಿಸರ ವ್ಯವಸ್ಥೆಯಲ್ಲಿ ಅಸಿತ ಇಲಾಖೆಗಳು ಮತ್ತು ಇತರ ಏಜೆಂಟ್ ಗಳು ( ಬ್ಯಾಂಕುಗಳು, ವಿಮಾ ಏಜೆನ್ಸಿಗಳು ಇತ್ಯಾದಿ) ಬಳಸಿಕೊಳ್ಳಬಹುದು. ಇದು ಪರಿಹಾರ, ಆರ್ ಟಿ ಸಿ, ಸಂರಕ್ಷಣೆಗೆ ಇತ್ಯಾದಿಗಳಂತಹ ಎಲ್ಲಾ ಡೇಟಾ ಬೇಸ್ ಗಳ ದಾಖಲೆಗಳಲ್ಲಿ ಖಚಿತಪಡಿಸುತ್ತದೆ ಎಲ್ಲಾ ವ್ಯವಸ್ಥೆಗಳು ನಿಖರವಾದ ಮತ್ತು ನವೀಕೃತ ರೈತ ಮತ್ತು ಬೆಳೆ ಅಂಕಿ ಅಂಶಗಳನ್ನು ಸಂಯೋಜಿತವಾಗಿ ಪ್ರವೇಶಿಸುವುದನ್ನು ಖಚಿತಪಡಿಸಿಕೊಳ್ಳುವುದು ಗುರಿಯಾಗಿದೆ ವಿದ್ಯಾರ್ಥಿಗಳಾದ ನಾವು ಹೊಸಕೋಟೆ ರೈತ ಸಂಪರ್ಕ ಕೇಂದ್ರ ನಿರ್ದೇಶನದಂತೆ ರೈತರ ತಾಕುಗಳಿಗೆ ತೆರಳಿ ಅವರ ಬೆಳೆಯ ಸರ್ವೆಯನ್ನು ನಡೆಸಿ ಅವರ ಮಾಹಿತಿಯನ್ನು ಸರ್ಕಾರಕ್ಕೆ ತಲುಪಿಸುವಲ್ಲಿ ಯಶಸ್ವಿಯಾಗಿದೆ.











# ಅಜೋಲಾ

ಜಲವಾಸಿ ಜರಿ ಗಿಡವು, ಜೈವಿಕ ಗೊಬ್ಬರ ಮತ್ತು ಜಾನುವಾರುಗಳಿಗೆ ಮೇವಿನ ಸುಲಭ ಹಾಗೂ ಅಗ್ಗದ ಮೂಲವಾಗಿದೆ. ಆದ್ರ ಭೂಮಿಯ ಭತ್ತಕ್ಕೆ ಜೈವಿಕ ಗೊಬ್ಬರವಾಗಿ, ಸಹವರ್ತಿ ಸಸ್ಯವಾಗಿ ಸಾರಜನಕ ಸರಿಪಡಿಸಲು, ಸಾಂಪ್ರದಾಯಿಕ 11 ಕೃಷಿಗೆ ಬಳಸುತ್ತಾರೆ. ಇದಲ್ಲದೆ ಅಜೋಲ್ಲದಲ್ಲಿ 50 ರಿಂದ 60 ಪ್ರತಿಶತ ಪ್ರೋಟೀನ್, ಅತ್ಯಗತ್ಯವಾದ ಜೀವಸತ್ವಗಳಿಂದ ಸಮೃದ್ಧವಾಗಿರುವುದರಿಂದ ಇದನ್ನು ಜಾನುವಾರುಗಳ ಆಹಾರವಾಗಿ ಉಪಯೋಗಿಸಬಹುದು.





ಸಾಂಪ್ರದಾಯಿಕ ಆಹಾರಕ್ಕೆ ಹೋಲಿಸಿದರೆ ಅಜೋಲ್ಲ ಬಳಕೆಯಿಂದ ಡೈರಿ ಜಾನುವಾರುಗಳಲ್ಲಿ ಹಾಲು ಉತ್ಪಾದನೆ, ಬ್ರಾಯರ್ ಕೋಳಿಗಳ ತೂಕ ಮತ್ತು ಪದರಗಳ ಮೊಟ್ಟೆಯ ಉತ್ಪಾದನೆ ವೃದ್ಧಿಯಾಗುತ್ತದೆ. ಸಮತಟ್ಟಾದ ಭೂಮಿಯಲ್ಲಿ 9 ಇಂಚು ಆಳದ ಗುಂಡಿಯನ್ನು, ಸ್ವಲ್ಪ ನೆರಳು ಇರುವ ಜಾಗದಲ್ಲಿ ತೋಡಿ ಅದನ್ನು ಪ್ಲಾಸ್ಟಿಕ್ ಹಾಳೆಯಿಂದ ಹೊದಿಸಬೇಕು. ಅದಕ್ಕೆ 10 ರಿಂದ 15 ಕೆಜಿ ಶೋಧಿಸಿದ ಮಣ್ಣು, ಎರಡು ದಿನ ಕೊಳೆತ 1 ರಿಂದ 2 ಕೆಜಿ ಸಗಣಿಯನ್ನು ಗುಂಡಿಯಲ್ಲಿನ 10 ಸೆಂ.ಮಿ.ನಷ್ಟು ನೀರಲ್ಲಿ ಮಿಶ್ರಿಸಬೇಕು. ಹತ್ತರಿಂದ ಇಪ್ಪತ್ತು ಗ್ರಾಂ ಎಸ್.ಎಸ್.ಪಿ. ಬೆರೆಸಬೇಕು. ಇದಕ್ಕೆ ಅರ್ಧ ಕೆಜಿ ಅಷ್ಟು ಅಜೋಲ್ಲವನ್ನು ನೀರಿನಲ್ಲಿ ಬಿಟ್ಟು ನೈಲಾನ್ ಪರದೆಯಿಂದ ಮುಚ್ಚಬೇಕು. 10 ರಿಂದ 15 ದಿನಗಳ ನಂತರ ಪ್ರತಿದಿನವೂ 1 ಕಿಲೋ ಅಜೋಲ್ಲವನ್ನು ಪಡೆಯಬಹುದು. ನೀರಿನಲ್ಲಿ ಸ್ವಚ್ಛಪಡಿಸಿ ಅಜೋಲ್ಲವನ್ನು ಹಸುಗಳಿಗೆ ಹಸಿ ಮೇವಿನ ರೀತಿಯಲ್ಲಿ ನೀಡಬಹುದು. ಈ ವಿಧಾನದ ಮೂಲಕ ಅಜೋಲ್ಲವನ್ನು ಬೆಳೆದು ಸರಿಯಾದ ನಿರ್ವಹಣೆ ಮೂಲಕ ಆದಾಯ ವೃದ್ಧಿಪಡಿಸುವ ಉದ್ದೇಶದಿಂದ ಗುಂಪು ಚರ್ಚೆ ಮತ್ತು ಅಜೋಲ ತೊಟ್ಟಿ ತುಂಬುವ ಮೂಲಕ ಪದ್ಧತಿ ಪ್ರಾತ್ಯಕ್ಷಿತೆಯನ್ನು ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು ರೈತರು ಭಾಗವಹಿಸಿ ಸದುಪಯೋಗವನ್ನು ಪಡೆದರು.





# ಪಿ ಆರ್ ಎ



**ಸಮಸ್ಯೆ ವೃಕ್ಷ ಮತ್ತು ಸಮಸ್ಯೆಪೆಟ್ಟಿಗೆ :**

**ಗ್ರಾಮದಲ್ಲಿ ಗುರುತಿಸಿರುವ ರೋಗ, ಕೀಟವಾದೆ ಮತ್ತು ಸಮಸ್ಯೆಗಳನ್ನು ಮರದ ಆಕೃತಿಯಲ್ಲಿ ಜೋಡಿಸಿ ಸಮಸ್ಯೆಯನ್ನು ರಚಿಸಲಾಗಿತ್ತು.ಸಮಸ್ಯಾವೃಕ್ಷದ ಮುಂಭಾಗದಲ್ಲಿ ಗ್ರಾಮದ ಪ್ರಮುಖ ರೋಗಗಳನ್ನು ಭಾದೆಗಳನ್ನು ಪ್ರತಿನಿಧಿಸುವ ತಟ್ಟೆಯನ್ನಿರಿಸಿ ರೈತರ ತಾಕುಗಳಲ್ಲಿ ಆ ಸಮಸ್ಯೆ ಬಾದಿಸುತ್ತಿದ್ದಲ್ಲಿ ಒಂದು ನಾಣ್ಯಾಕಾರದ ಕಾಗದವನ್ನು ಹಾಕುವ ಮೂಲಕ ಚಟುವಟಿಕೆ ನಡೆಸಿ ರೈತರ ಸಮಸ್ಯೆಗಳ ಮಾಹಿತಿಯನ್ನು ಪಡೆಯಲಾಯಿತು.**





**ರೈತರ ಆಯ್ಕೆ :**

**ರೈತರಿಗೆ ಮಾಹಿತಿಯನ್ನು ನೀಡುವುದಕ್ಕೆ ಮೊದಲು ಅವರು ನಡೆಸುವ ಮತ್ತು ನಡೆಸಲು ಬಯಸುವ ಕೃಷಿ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯುವುದು ಅತ್ಯಗತ್ಯ. ಅವರ ಈ ಆಸಕ್ತಿಯನ್ನು ತಿಳಿದುಕೊಳ್ಳಲು ಚಟುವಟಿಕೆಯನ್ನು ನಡೆಸಲಾಯಿತು. ಆಯಾ ಕೃಷಿ ಕಾರ್ಯಗಳನ್ನು ಪ್ರತಿನಿಧಿಸುವ ಆಕೃತಿಗಳನ್ನು ಬಣ್ಣದಲ್ಲಿ ಅದ್ದಿ ಆಯಾ ಕೃಷಿ ಚಟುವಟಿಕೆಗಳನ್ನು ಪ್ರತಿನಿಧಿಸುವ ಜಾಗದಲ್ಲಿ ಅಚೊತ್ತುವ ಮೂಲಕ ಮಾಹಿತಿಗಳನ್ನು ಹಂಚಿಕೊಂಡರು.**



**ಮಾರುಕಟ್ಟೆಯ ಮಾರ್ಗಗಳು:**

**ಬೆಳೆಯ ಕೊಯ್ಲಿನ ನಂತರ ನಡೆಯುವ ಪ್ರಮುಖ ಕಾರ್ಯವೇ ಮಾರಾಟ. ಈ ಮಾರಾಟಕ್ಕೆ ರೈತ ಹಲವಾರು ಮಾರ್ಗಗಳನ್ನು ಬಳಸುತ್ತಿರುತ್ತಾನೆ. ಈ ಬಗೆಗಿನ ಮಾಹಿತಿಯನ್ನು ಪಡೆಯುವುದಕ್ಕಾಗಿ ಚಟುವಟಿಕೆಯನ್ನು ನಡೆಸಲಾಯಿತು. ರೈತರು ಒಂದೊಂದು ಬೆಳೆಯನ್ನು ಪ್ರತಿನಿಧಿಸುವ ಒಂದೊಂದು ಬಣ್ಣದ ಚೆಂಡುಗಳನ್ನು ತಾವು ಆ ಬೆಳೆಯ ಮಾರಾಟಕ್ಕೆ ಬಳಸುವ ಮಾರ್ಗವನ್ನು ಪ್ರತಿನಿಧಿಸುವ ತಟ್ಟೆಗೆ ಹಾಕುವುದರ ಮೂಲಕ ಮಾಹಿತಿಯನ್ನು ಹಂಚಿಕೊಂಡರು.**



# ಎರೆಹುಳು ಗೊಬ್ಬರದ ತಯಾರಿ





ರೈತನ ಮಿತ್ರ ಎಂದೇ ಪ್ರಸಿದ್ಧ ವಾಗಿರುವ ಜೀವಿ ಎರೆಹುಳು, ಇದು ಮಣ್ಣನ್ನು ಹದಗೊಳಿಸುವುದಲ್ಲದೆ, ಎರೆಹುಳ ಗೊಬ್ಬರವನ್ನು ತಯಾರಿಸಲು ಸಹಾಯಕವಾಗುತ್ತದೆ ಎರೆಹುಳ ಕೊಳೆಯುವ ತರಕಾರಿಗಳನ್ನು, ಆಹಾರ ತ್ಯಾಜ್ಯಗಳನ್ನು, ಹಸಿ ಹುಲ್ಲನ್ನು ಮತ್ತು ಗೊಬ್ಬರವನ್ನು ಭಕ್ಷಿಸಿ ಜೀರ್ಣಿಸಿ ವಿಸರ್ಜನೆ ಮಾಡಿದಾಗ ದೊರೆಯುವ ವಸ್ತುವೇ ಎರೆಹುಳ ಗೊಬ್ಬರ.

ಎರೆಹುಳು ಗೊಬ್ಬರವನ್ನು ಐಸೇನಿಯಾ ಫೆಟಿಡಾ, ಫಂಯೋನಿಕ್ಸ್ ಎಕ್ಸ್ ಕ್ಯಾವೆಟಸ, ಯೂಡ್ರಿಲಸ ಯುಜಿನೇ ಎಂಬ ವಿವಿಧ ಜಾತಿಯ ಎರೆಹುಳುಗಳನ್ನು ಬಳಸಿಕೊಂಡು ತಯಾರಿಸಲಾಗುತ್ತದೆ. ಈ ಎರೆಹುಳುಗಳ ಬಳಕೆ, ನಿರ್ವಹಣೆ ಮತ್ತು ಗೊಬ್ಬರ ನಿರ್ವಹಣೆ ಬಗ್ಗೆ ಪ್ರಾತ್ಯಕ್ಷಿಕೆ ಮತ್ತು ಗುಂಪು ಚರ್ಚೆ ನಡೆಸಲಾಯಿತು. ರೈತರಿಗೆ ಎರೆಹುಳ ಗೊಬ್ಬರದ ತೊಟ್ಟಿ ನಿರ್ಮಿಸುವ ವಿಧಾನ, ಅಳತೆ, ಎರೆ ಹುಳುಗಳನ್ನು ಆಯ್ಕೆ .. ಮಾಡುವ ವಿಧಾನ, ಎರೆಹುಳುಗಳನ್ನು ತೊಟ್ಟಿಗೆ ಬಿಡುವ ಸಮಯ, ಗೊಬ್ಬರದ ತೊಟ್ಟಿಗೆ ತುಂಬಬಹುದಾದ ತ್ಯಾಜ್ಯ ವಸ್ತುಗಳು, ನೀರುಣಿಕೆಯ ಸಮಯ ಹಾಗೂ ಅದನ್ನು ಬಳಸುವ ರೀತಿ ಮತ್ತು ಉಪಯೋಗಗಳನ್ನು ಗುಂಪು ಸಭೆಯಲ್ಲಿ ಚರ್ಚಿಸಲಾಯಿತು. ರೈತರು ಈ ಪ್ರಾತ್ಯಕ್ಷಿಕೆ ಮತ್ತು ಗುಂಪು ಚರ್ಚೆಯಲ್ಲಿ ಭಾಗವಹಿಸಿ ಅದರ ಉಪಯೋಗಗಳನ್ನು ಪಡೆದುಕೊಂಡರು ಹಾಗೂ ತಮ್ಮ ಅನುಮಾನಗಳನ್ನು ಚರ್ಚಿಸಿ ಬಗೆಹರಿಸಿಕೊಂಡರು.





# ರೈತರ ಬೆಳೆ ಕ್ಷೇತ್ರ ಭೇಟಿ

ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಒಂದು ಪ್ರಮುಖ ಭಾಗ ಐದು ಜನ ಸಂಪರ್ಕ ರೈತರು. ಅಂತಹ ರೈತರ ತಾಕುಗಳಿಗೆಭೇಟಿ ನೀಡಿದಾಗ ಆದ ಅನುಭವ ಅವರ ಸಮಸ್ಯೆಗಳ ಬಗ್ಗೆ ವಿವರ ಈ ಕೆಳಗಿನಂತಿದೆ.



## ಹೊನ್ನು ಬೆಳೆದ ಲಕ್ಕೊಂಡಹಳ್ಳಿ ರೈತರು





ದೃಷ್ಟಿ ಹಾಯಿಸಿದಷ್ಟು ಹಚ್ಚ ಹಸುರಾಗಿ ಬೆಳೆದಿರುವ ತರಕಾರಿ ಗಿಡಗಳು, ಚಿಗುರೊಡೆಯುತ್ತಿರುವ ರಾಗಿಯ ಪೈರುಗಳು, ಹೊಸ ತಂತ್ರಜ್ಞಾನಗಳನ್ನು ಬಳಸಿ ಬೆಳೆ ತೆಗೆಯುವ ಹಂಬಲದ ರೈತರು. ಈ ಚಿತ್ರಣ ಕಂಡದ್ದು ತಿಮ್ಮೇಗೌಡ, ಮೊದಲಾದ ರೈತರ ಹೊಲಗಳಲ್ಲಿ.

ಸುಮಾರು ಎರಡು ವರ್ಷಗಳಿಂದ ಟೊಮ್ಯಾಟೊ ಬೆಳೆಯ ಮೇಲೆ ಅವಲಂಭಿತರಾಗಿ ಕೃಷಿ ನಡಿಸಿ ಕೆಲವಾರು ಬಾರಿ ಗೆದ್ದುಸೋತಿದ್ದ ರೈತರು, ಕೃಷಿ ವಿಜ್ಞಾನಿಗಳ ಸಹಾಯದಿಂದ ಬಹು ವಿಧದ ತರಕಾರಿ ಮತ್ತು ರಾಗಿ ಬೆಳೆದು ಯಶಸ್ಸುಕಂಡರು. ಪ್ರಸ್ತುತ ಹಾಗಲಕಾಯಿ, ಅಡಿಕೆ ಮತ್ತು ಅಂತರ ಬೆಳೆಯಾಗಿ ಬಾಳೆ, ರಾಗಿ, ಬದನೆಕಾಯಿ, ಸೌತೆಕಾಯಿಯಂತಹ ಬೆಳೆಗಳನ್ನು ಮಾರುಕಟ್ಟೆಯ ಬೇಡಿಕೆ ಮೇರೆಗೆ ನಾಟಿ ಮಾಡಿ ಲಾಭ ಪಡೆಯುತ್ತಿದ್ದಾರೆ. ಇವರ ತಾಕುಗಳಿಗೆ ಭೇಟಿ ನೀಡಿದ ನಾವು ಇವರಿಗೆ ಸೂಕ್ಷ್ಮಾಣು ಜೀವಿಗಳ ಮಿಶ್ರಣ ಮತ್ತು ಬೆಳವಣಿಗೆಗೆ ಪ್ರಚೋದಕಗಳನ್ನು ಬಳಸಲು ತಿಳಿಸಿದೆವು.





# ಕೃಷಿ ಹೊಂಡ



ಒಡಿಶಾ ವಾರ್ಷಿಕ ಸರಾಸರಿ 1400 ಮಿಮೀ ಮಳೆಯಾಗುತ್ತದೆ. ಆದಾಗ್ಯೂ, ಖಾರಿಫ್ ಸಮಯದಲ್ಲಿ ಕೃಷಿ ಪದ್ಧತಿಗಳಿಗೆ ಅಂತಹ ಪ್ರಮಾಣದ ಮಳೆಯು ಸಾಕಾಗುತ್ತದೆ, ಅದರ ಅನಿಯಮಿತ ಮತ್ತು ಅಸಮ ವಿತರಣೆಯು ಬರ ಮತ್ತು ಪ್ರವಾಹದ ಸಂಭವಕ್ಕೆ ಕಾರಣವಾಗುತ್ತದೆ. ಬೆಳೆ ಬೆಳವಣಿಗೆಯ ನಿರ್ಣಾಯಕ ಹಂತಗಳಲ್ಲಿ ನೀರಿನ ಕೊರತೆಯು ಅದರ ಉತ್ಪಾದನೆಯನ್ನು ಅಡ್ಡಿಪಡಿಸುತ್ತದೆ; ಆದ್ದರಿಂದ ಇದು ರೈತರ ಆದಾಯದ ಮೇಲೆ ಪರಿಣಾಮ ಬೀರುತ್ತದೆ. ಆ ನಿರ್ಣಾಯಕ ಸಮಯದಲ್ಲಿ ನೀರಿನ ಕೊರತೆಯನ್ನು ಪೂರೈಸಲು, ಕೃಷಿ ಹೊಂಡ ಯೋಜನೆಯನ್ನು ವಿಶೇಷವಾಗಿ ಖಾರಿಫ್ ಸಮಯದಲ್ಲಿ ಜೀವರಕ್ಷಕ ನೀರಾವರಿ ಒದಗಿಸಲು ಮತ್ತು ಸಮಗ್ರ ಕೃಷಿ ವ್ಯವಸ್ಥೆಯನ್ನು ಜನಪ್ರಿಯಗೊಳಿಸಲು ಪರಿಕಲ್ಪನೆ ಮಾಡಲಾಗಿದೆ.

ಉದ್ದೇಶ:-

ಕನಿಷ್ಠ ಹೂಡಿಕೆಯೊಂದಿಗೆ ಮಳೆಗಾಲದಲ್ಲಿ ಶೇಖರಣಾ ಸೌಲಭ್ಯವನ್ನು ರಚಿಸುವುದು ಮತ್ತು ಖಾರಿಫ್ ಸಮಯದಲ್ಲಿ ಅನಿಯಮಿತ ಮಳೆ ವಿತರಣೆಯ ಸಂದರ್ಭದಲ್ಲಿ ಜೀವ ಉಳಿಸುವ ನೀರಾವರಿ ಒದಗಿಸುವುದು.

ಸುಸ್ಥಿರ ಕೃಷಿಗಾಗಿ ಸಮಗ್ರ ಕೃಷಿ ವ್ಯವಸ್ಥೆಯನ್ನು (IFS) ಕೈಗೆತ್ತಿಕೊಳ್ಳುವುದು ಮತ್ತು ಕೃಷಿ ಕುಟುಂಬಗಳಿಗೆ ಹೆಚ್ಚುವರಿ ಆದಾಯದ ಉತ್ಪಾದನೆ ಮತ್ತು ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು

MGNREGA ಯ ಆದೇಶದಂತೆ ಕೌಶಲ್ಯರಹಿತ ಕಾರ್ಮಿಕರಿಗೆ ಆದಾಯ ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿಯನ್ನು ಖಚಿತಪಡಿಸಿಕೊಳ್ಳಲು








# ಕೀಟನಾಶಕಗಳನ್ನು ಸಿಂಪಡಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು









'ಕೀಟನಾಶಕಗಳ ಹೆಚ್ಚಿನ ಸಿಂಪಡಿಕೆಯು ಉಸಿರಾಟದ ತೊಂದರೆಗಳು, ಸಂತಾನೋತ್ಪತ್ತಿ ಸಮಸ್ಯೆಗಳು, ಅಂತಃಸ್ರಾವಕ ವ್ಯವಸ್ಥೆಯ ತೊಂದರೆಗಳು, ನರವೈಜ್ಞಾನಿಕ ಸಮಸ್ಯೆಗಳು ಮತ್ತು ಕೆಲವು ಕ್ಯಾನ್ಸರ್‌ಗಳಂತಹ ನಕಾರಾತ್ಮಕ ಆರೋಗ್ಯ ಪರಿಣಾಮಗಳಿಗೆ ನೇರ ಕಾರಣವಾಗಿವೆ'

- ಕೈ ಮತ್ತು ಕಾಲು ಮುಚ್ಚುವಂತೆ ವಸ್ತ್ರ ಧರಿಸಬೇಕು
- ತಲೆಭಾಗ ಮುಚ್ಚುವ ರೀತಿಯಲ್ಲಿ ಟೋಪಿಯನ್ನು ಹಾಕಬೇಕು
- ಕಣ್ಣನ್ನು ರಾಸಾಯನಿಕ ದ್ರವದಿಂದ ರಕ್ಷಿಸಲು ಕನ್ನಡಕ ಹಾಕಬೇಕು
- ಮೂಗು ಮತ್ತು ಬಾಯಿ ಮುಚ್ಚುವಂತೆ ಮುಖಗವಸ ಹಾಕಬೇಕು
- ಕೈಗಳಿಗೆ ಹ್ಯಾಂಡ್ ಗ್ಲೌಸ್ ಮತ್ತು ಪಾದ ಮುಚ್ಚುವಂತೆ ಬೂಟು ಹಾಕಬೇಕು
- ಸಿಂಪಡೆಯ ನಂತರ ಸಾಬೂನಿನಿಂದ ಸ್ನಾನ ಮಾಡಬೇಕು.

## ಕಿರು ನಾಟಕ





# ಬ್ರೋಕಲಿ ಕಪ್ಪು ಕೊಳೆಪೆ ರೋಗ



## ರೋಗ ಲಕ್ಷಣಗಳು

- V ಆಕಾರದ ಕ್ಲೋರೋಟಿಕ್ ಗಾಯಗಳು
- ನಾಳೀಯ ಅಂಗಾಂಶಗಳನ್ನು ಕಪ್ಪಾಗಿಸುವುದು
- ಕುಂಠಿತ ಬೆಳವಣಿಗೆ
- ಕಾಂಡ ಕೊಳೆತ ಲಕ್ಷಣಗಳನ್ನು ಕಾಣಬಹುದು



## ರೋಗದ ನಿರ್ವಹಣೆ

- ರೋಗ ಮುಕ್ತ ಪ್ರಮಾಣೀಕೃತ ಬೀಜ ಬಳಕೆ
- ಕ್ರಿಸಿಫರ್ಸ್ ಬೆಳೆಯಲ್ಲದೆ, ಬೇರೆ ಬೆಳೆಯನ್ನು ಬೆಳೆಯಬೇಕು
- ಬೀಜಗಳನ್ನು 100ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ನಲ್ಲಿ ಅದ್ದುವುದು
- ಸಿ ಒ ಸಿ 2-3 ಗ್ರಾಂ/ಲೀ ಸಿಂಪಡಿಸುವುದು

# ಮೆಕ್ಕೆ ಜೋಳದಲ್ಲಿ ಸೈನಿಕ ಹುಳು



ಈ ಕೀಟ ಪ್ರಮುಖವಾಗಿ  ಮೆಕ್ಕೆ ಜೋಳದ ಪೀಡೆಯಾಗಿದ್ದು ಹಾನಿಯ ಪ್ರಮಾಣ ಶೇ.12-48 ರಷ್ಟು ಇದೆ.  ಮೋಡ ಕವಿದ ವಾತಾವ.ರಣ, ಹೆಚ್ಚಿನ ಮಳೆ, ಹೆಚ್ಚಿನ ತೇವಾಂಶ ಮತ್ತು ಕಡಿಮೆ ಉಷ್ಣಾಂಶದಲ್ಲಿ ಇದರ ಹಾವಳಿ ಹೆಚ್ಚು. ಇದು ಎಲೆಗಳನ್ನು ಕೊರೆದು ತಿನ್ನುತ್ತವೆ ಹಾಗೂ ಸುಳಿಯಲ್ಲಿ ಅತೀ ಹೆಚ್ಚಾಗಿ ಕಾಣುತ್ತದೆ.

## ಇದರ ಸಮಗ್ರ ಕೀಟ ನಿರ್ವಣೆ;


- ಬೇಸಿಗೆಯಲ್ಲಿ ಆಳವಾಗಿ ಉಳುಮೆ ಮಾಡುವುದು
- ಮುಂಚಿತವಾಗಿ ಬಿತ್ತನೆ ಮಾಡುವುದು
- ಬೀಜೋಪಚಾರ, ಫಾರ್ಟೆಂಜ ಡ್ಯು @ 4ml/kg ಬೀಜ
- ಹುಳು ಮತ್ತು ಮೊಟ್ಟೆಗಳನ್ನು ಕೃಡೀಕರಿಸಿ ನಾಶಮಾಡುವುದು
- ಲಿಂಗಾಕರ್ಷಕ ಬಲೆಗಳನ್ನು ಎಕರೆಗೆ 4 ರಂತೆ ಬಳಸಬೇಕು
- ಪ್ರಾರಂಭಿಕ ಹಂತದಲ್ಲಿ ಅಜಾರ್ಡಿಕ್ಟಿನ್ 5%
- ಹಾನಿ ಹೆಚ್ಚಾದಾಗ ಎಮಾಮೆಕ್ಟಿನ್ ಬೆಂಜೋಯೇಟ್  5%. S.G @0.4 gm/litre ಸಿಂಪಡಿಸಬೇಕು
- ವಿಶಪಾಷಾಣವನ್ನು ತಯಾರಿಸಿ ಎಲೆಗಳ ಸುಳಿಯಲ್ಲಿ ಹಾಕಬಹುದು







# ಸಮಸ್ಯಾ ವೃಕ್ಷ




## ಸೇವಂತಿಗೆ ಅಲ್ಲಿ ಕಂಡುಬಂದ ಸಮಸ್ಯೆಗಳು

- ಸೊರಗು ರೋಗ
- ಬೆಳಕು ನಿರ್ವಹಣೆ
- ಮಾರುಕಟ್ಟೆ ಬೆಲೆ ಕುಸಿತ

## ಗುಲಾಬಿಯಲ್ಲಿ ಕಂಡುಬಂದ ಸಮಸ್ಯೆಗಳು

- ಕಪ್ಪು ಚುಕ್ಕೆ ರೋಗ
- ಬೇರು ಕೊಳೆಯುವಿಕೆ
- ನುಸಿ ಬಾಧೆ
- ಪೋಷಕಾಂಶ ಕೊರತೆ

## ಬ್ರೊಕೋಲಿ ಕಂಡುಬಂದ ಸಮಸ್ಯೆಗಳು

- ಏಕ ಬೆಳೆ ಪದ್ಧತಿ
- ವಜ್ರಬೆನ್ನಿನ ಹುಳು
- ಕಪ್ಪು ಕೊಳಪೆ ರೋಗ
- ಏಕರೂಪದ ಕೊಯ್ಲು ಇಲ್ಲದಿರುವಿಕೆ

## ಜೋಳದಲ್ಲಿ ಕಂಡುಬಂದ ಸಮಸ್ಯೆಗಳು

- ಅಂಗಮಾರಿ ರೋಗ
- ಸೈನಿಕ ಹುಳು
- ಪೋಷಕಾಂಶ ಕೊರತೆ

## ರಾಗಿಯಲ್ಲಿ ಕಂಡುಬಂದ ಸಮಸ್ಯೆಗಳು

- ಮಳೆಯಾಶ್ರಿತ ಬೆಳೆ
- ಬೆಂಕಿ ರೋಗ
- ಕಳೆಗಳು
- ಹೊಸ ತಳಿಗಳ ಮಾಹಿತಿ ಕೊರತೆ

# ವಿಶ್ವ ಮಣ್ಣಿನ ದಿನ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಲಕ್ಕೊಂಡಹಳ್ಳಿಯಲ್ಲಿ ಗ್ರಾಮೀಣ ಕೃಷಿ ಕಾರ್ಯನುಭವ ಕಾರ್ಯಕ್ರಮ 2023 - 24 ರ ಅಂಗವಾಗ ಕೃಷಿ ಮಹಾವಿದ್ಯಾನಿಲಯದ ಅಂತಿಮ ವರ್ಷದ ಬಿ.ಎಸ್ಸಿ (ಆನರ್ಸ್) ಕೃಷಿ, ಕೃಷಿ ವ್ಯವಹಾರ ನಿರ್ವಹಣೆ, ಮತ್ತು ಬಿ.ಟೆಕ್ (ಕೃಷಿ ಇಂಜಿನಿಯರಿಂಗ್), ವಿದ್ಯಾರ್ಥಿಗಳು ದಿನಾಂಕ 05 - 12- 2023 ರಂದು ವಿಶ್ವ ಮಣ್ಣಿನ ದಿನಾಚಾರಣೆಯನ್ನು ಆಚರಿಸಿದೆವು





ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಸರಳ ಕುಮಾರಿ ಮ್ಯಾಮ್, ಶ್ರೀನಿವಾಸ್ ಸರ್, ಮತ್ತು ರೈತ ಸಂಪರ್ಕ ಕೇಂದ್ರದ ಎ ಒ ಆದ ರೇಣುಕಾ ಪ್ರಸನ್ನ ಸರ್ ಮತ್ತು ಲಕ್ಕೊಂಡಹಳ್ಳಿಯ ಗ್ರಾಮಸ್ಥರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಸುಮಾರು 30 ರೈತರು, 13 ರೈತ ಮಹಿಳೆಯರು, 37 ವಿದ್ಯಾರ್ಥಿಗಳು, ಒಟ್ಟು 69 ಜನ ಸೇರಿದ್ದರು. ಕಾರ್ಯಕ್ರಮದಲ್ಲಿ ಮಣ್ಣಿನ ಮಹತ್ವ, ಸಮಗ್ರ ಪೋಷಕಾಂಶ ನಿರ್ವಹಣೆ ಮತ್ತು ರಾಸಾಯನಿಕ ಗೊಬ್ಬರದಿಂದ ಹಾಗೂ ಕಳೆನಾಶಕದಿಂದ ಮಣ್ಣಿಗೆ ಆಗುತ್ತಿರುವ ತೊಂದರೆ ಬಗ್ಗೆ ತಿಳಿಸಲಾಯಿತು.

ಮಣ್ಣಿನ ಬಗ್ಗೆ ಅರಿವು ಮೂಡಿಸಲು ಶಾಲಾ ಮಕ್ಕಳಿಗೆ ವಿಶ್ವ ಮಣ್ಣಿನ ದಿನದ ಅಂಗವಾಗಿ ಕೆಲವು ಸ್ಪರ್ಧೆಗಳನ್ನು ನಡೆಸಿದೆವು ಅವುಗಳೆಂದರೆ ಪ್ರಬಂಧ, ಚಿತ್ರಕಲೆ ಮತ್ತು ರಸ ಪ್ರಶ್ನೆ ಸ್ಪರ್ಧೆ. ಇದರಲ್ಲಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಕೀರ್ತನ ಮತ್ತು ತೇಜಸ್ವಿನಿ, ಪ್ರಬಂಧ ಸ್ಪರ್ಧೆಯಲ್ಲಿ ತೇಜಸ್ವಿನಿ, ಮತ್ತು ಚಿತ್ರಕಲೆ ಸ್ಪರ್ಧೆಯಲ್ಲಿ ಸೊನಮ್ ಮೊದಲನೆ ಬಹುಮಾನ ಪಡೆದರು.






# ಅಣಬೆ ಬೇಸಾಯ

ಅಣಬೆ ಸಸ್ಯವರ್ಗಕ್ಕೆ ಸೇರಿದ ಶಿಲೀಂದ್ರ. ಆಹಾರ ಪದಾರ್ಥಗಳ ಪಟ್ಟಿಯಲ್ಲಿ ಅಣಬೆಯನ್ನು ತರಕಾರಿ ಎಂದು ಗುರುತಿಸಲಾಗುತ್ತದೆ. ಇದೊಂದು ಉತ್ತಮ ಆಹಾರ. ಹಲವಾರು ವಿಧದ ಅಣಬೆಗಳನ್ನು ನಾವು ಕಾಣಬಹುದು. ಅವುಗಳಲ್ಲಿ ಬಹುಪಾಲು ಅಣಬೆಗಳು ತಿನ್ನಲು ಯೋಗ್ಯವಾಗಿವೆ.



ಭತ್ತದ ಹುಲ್ಲನ್ನು ರಾತ್ರಿಯಿಡಿ ನೆನಸಿ ನಂತರ ಬೆಳಗ್ಗೆ ಬಿಸಿನೀರಿನಲ್ಲಿ 50-60 ನಿಮಿಷ ಬೇಹಿಸಿ ಅದನ್ನು ನೆರಳಿನಲ್ಲಿ ಒಣಗಿಸಬೇಕು. ನಂತರ ಅದನ್ನು 5 ಕೆಜಿ ಚೀಲದಲ್ಲಿ ಪದರಾಗಳಂತೆ ತುಂಬಬೇಕು ಒಂದು ಪದರ ಹುಲ್ಲು ಅದರ ಮೇಲೆ ಸುತ್ತಲು ಅಣಬೆ ಬೀಜಗಳನ್ನು ಹಾಕಬೇಕು ಅದರ ಮೇಲೆ ಮತ್ತೆ ಹುಲನ್ನು ಹಾಕಬೇಕು ಈಗೆ 4 ಪದರಗಳು ಮಾಡಿ ಗಾಳಿ ಆಡದಂತೆ ಚೀಲಕ್ಕೆ ರಬ್ಬರ್ * ಬ್ಯಾಂಡ್ ಇಂದ ಕಟ್ಟಬೇಕು.ನಂತರ ಚೀಲಕ್ಕೆ 9-10 ತೂತುಗಳನ್ನು ಮಾಡಬೇಕು. ಅದನ್ನು 21 ದಿನಗಳ ಕಾಲ ಕತ್ತಲ ಕೋಣೆಯಲ್ಲಿ ಇಡಬೇಕು. ನಂತರ ಅದನ್ನು ಬೆಳಕಿಗೆ ಇಡಬೇಕು. ದಿನಕ್ಕೆ 3 ಬಾರಿ ನೀರು ಹಾಕಬೇಕು ನಂತರ 3-4 ದಿನಗಳಲ್ಲಿ ಬಟನ್ ಕಾಣಿಸುತ್ತದೆ.

ಅಣಬೆಯ ತಯಾರಿಕೆ ಮತ್ತು ಉಪಯೋಗಗಳನ್ನು ರೈತರಿಗೆ ತಿಳಿಸಿಕೊಟ್ಟೇವು ಹಾಗೂ ಅಣಬೆ ಬೇಸಾಯದಿಂದ ಅವರಿಗೆ ಹೆಚ್ಚು ಲಾಭ ದೊರೆಯುತ್ತದೆ ಹಾಗೂ ಅವರ ಆರ್ಥಿಕತೆ ಹೆಚ್ಚಾಗಿಸಬಹುದು, ಒಂದು ಪಟ್ಟು ಖರ್ಚು ಮಾಡಿದರೆ 10 ಪಟ್ಟು ಲಾಭ ಪಡೆಯಬಹುದು ಎಂದು ತಿಳಿಸಿದೆವು.




# ಕಿಸಾನ್ ಕ್ರೆಡಿಟ್ ಕಾರ್ಡ್

ರೈತರನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಜಾರಿಗೆ ತಂದಿರುವ ಯೋಜನೆಗಳ ಪೈಕಿ 'ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ' ಮಹತ್ವದ ಯೋಜನೆಯಾಗಿದೆ. ಈ ಯೋಜನೆಯಡಿ ರೈತರು ಯಾವುದೇ ಅಡಮಾನ ಇಲ್ಲದೆ 1.6 ಲಕ್ಷ ರೂಪಾಯಿವರೆಗೆ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಪಡೆಯಬಹುದಾಗಿದೆ. ಅಂದರೆ, ತಿಂಗಳಿಗೆ ಶೇ.0.5ಕ್ಕಿಂತಲೂ ಕಡಿಮೆ ಬಡ್ಡಿಗೆ ಸಾಲ ಲಭ್ಯವಾಗಲಿದೆ







ಅವರು ತಮ್ಮ ಹೊಲಗಳಿಗೆ ಬಿತ್ತನೆ ಮಾಡುವುದು, ಬೆಳೆ ಪೋಷಣೆ, ಬೆಳೆಗಳಿಗೆ ರಸಗೊಬ್ಬರ ಹಾಕುವುದು ಮೊದಲಾದ ಕೃಷಿ ಚಟುವಟಿಕೆಗಳಿಗೆ ಸಾಲ ಪಡೆಯಲು ಕಿಸಾನ್ ಕ್ರೆಡಿಟ್ ಕಾರ್ಡ್ ಬಳಸಬಹುದು.

ಅಷ್ಟೇ ಅಲ್ಲದೆ, ರೈತರು ತಮ್ಮ ಬೆಳೆಗಳಿಗೆ ಈ ಕಾರ್ಡ್ ಮೂಲಕ ವಿಮೆ ಮಾಡಿಸಿಕೊಳ್ಳಬಹುದು. ಈ ಹಿಂದೆ ರೈತರು ಮಾತ್ರ ಈ ಸೌಲಭ್ಯ ಪಡೆದುಕೊಳ್ಳಬಹುದಾಗಿತ್ತು. ಪ್ರಸ್ತುತ ಸರ್ಕಾರವು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ವ್ಯಾಪ್ತಿಗೆ ಪಶುಸಂಗೋಪನೆ, ಹೈನುಗಾರಿಕೆ, ಮತ್ತು ಮೀನುಗಾರರನ್ನು ಸೇರಿಸಿದೆ. ಈ ಕಾರ್ಡ್ ಮೂಲಕ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ.







Canara Bank
GPS Map
Kambalipura, Karnataka, India
4RJ3+8HP, Kambalipura, Karnataka 562114, India
Lat 13.130886°













GPS













RUN

Karnataka







Ahdal niyaz
Aishwarya DN
Aishwarya S
Akul Gowda
Amrutha G
Anika Prakash
Anupam Shetty
Apoorva M
Arun Kumar
Keen
Basavaraj SB
Basavaraj HG
RAWEP-2023
Bavani
Bhagyashree
Bhargav Reddy
Bhuvaneshwari
Chandan
Chandushree
Chitrashree
Darshan
Deepak
Deekshitha
KC Divya
Divyashree VM



**ಶ್ರೀ ಶರತ್ ಬಚ್ಚೇಗೌಡರವರು**

ಸನ್ಮಾನ್ಯ ಶಾಸಕರು, ಹೊಸಕೋಟೆ ವಿಧಾನಸಭಾ
ಕ್ಷೇತ್ರ ಮತ್ತು
ವ್ಯವಸ್ಥಾಪನಾ ಮಂಡಳಿ ಸದಸ್ಯರು



**ಶ್ರೀಯುತ ಗೋಪಾಲ ಗೌಡರು**



**ಶ್ರೀಯುತ ಸತೀಶ್ ಗೌಡರು**



**ಶ್ರೀಯುತ ನಾರಾಯಣ ಗೌಡರು**



**ಶ್ರೀ ಮಂಜುನಾಥರವರು**

ಮಾಜಿ ಬ್ಲಾಕ್ ಕಾಂಗ್ರೆಸ್
ಅಧ್ಯಕ್ಷರು



**ಶ್ರೀಮತಿ ಎಚ್. ಎನ್. ಭಾರತಿ ದೇವರಾಜ್**

ಅಧ್ಯಕ್ಷರು, ಲಕ್ಕೊಂಡಹಳ್ಳಿ
ಗ್ರಾಮ ಪಂಚಾಯಿತಿ



**ಶ್ರೀಯುತ ಆನಂದ್ . ಎಲ್. ಎಂ.**



**ಶ್ರೀಯುತ ಮಂಜುನಾಥರವರು**



**ಶ್ರೀಮತಿ ಪದ್ಮಾವತಿ ಮಂಜುನಾಥರವರು**



**ಶ್ರೀಯುತ ಸುರೇಶ್ ರವರು**



**ಶ್ರೀಯುತ ನಾರಾಯಣಸ್ವಾಮಿರವರು**



**ಶ್ರೀಯುತ ಜಗದೀಶ್ ರವರು**